**ಪ್ರಧಾನ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ.**

**ಸಿ.ಸಿ ನಂ: 366/2021**

**PW-3**
**CW-4**

ಹೆಸರು : ಕೆ ಬಿ ಕುರಹಟ್ಟಿ

ವಯಸ್ಸು : **49** ವರ್ಷ

ಉದ್ಯೋಗ : ಅಬಕಾರಿ ರಕ್ಷಕ

ವಾಸ : ಅಬಕಾರಿ ಉಪ ಆಯುಕ್ತರ ಕಛೇರಿ ಬೆಳಗಾವಿ

ದಿನಾಂಕ **06-12-2022** ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ನಾನು ಕಳೆದ 5 ವರ್ಷಗಳಿಂದ ನಾನು ಅಬಕಾರಿ ಉಪ ಆಯುಕ್ತರ ಕಛೇರಿ ಬೆಳಗಾವಿಯಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕ 26-09-2020 ರಂದು ಮುಂಜಾನೆ 5.45 ಕ್ಕೆ ಕಣಕುಂಬಿ ಗ್ರಾಮದ ಡೆಲ್ಟಾ ಧಾಬಾದ ಹತ್ತಿರ ಚಾಸಾ 1 ರವರ ಜೊತೆ ರಸ್ತೆ ಗಾವಲು ಮಾಡುತ್ತಿದ್ದಾಗ ಅರೋಪಿಯು ಎರಡು ಗೋಣಿ ಚೀಲದದಲ್ಲಿ ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುವಾಗ ಸಿಕ್ಕಿ ಬಿದ್ದಿದ್ದು, ನಂತರ ಪಂಚರ ಸಮಕ್ಷಮ ಸದರಿ ಮದ್ಯವನ್ನು ಅಮಾನತ್ತುಪಡಿಸಿ, ರಾಸಾಯನಿಕ ಪರೀಕ್ಷೆಗಾಗಿ 1 ಬಾಟಲಿಯನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿರುತ್ತಾರೆ. ನಂತರ ಆರೋಪಿ ಹಾಗೂ ಸಿಕ್ಕ ಮುದ್ದೆಮಾಲುಗಳನ್ನು ಜಪ್ತುಪಡಿಸಿ ಕಛೇರಿಗೆ ವಾಪಸ ಆಗಿದ್ದು, ಚಾಸಾ 1 ರವರು ಈ ಬಗ್ಗೆ ಸರ್ಕಾರದ ಪರವಾಗಿ ಸ್ವಪಿರ್ಯಾದನ್ನು ಸಲ್ಲಿಸಿ, ಪ್ರಕರಣ ದಾಖಲಿಸಿರುತ್ತಾರೆ. ಸಾಕ್ಷಿಯು ಈಗ ಎಂ.ಒ 1 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಿ ಎಸ ಹೆಚ ವಕೀಲರಿಂದ</u>**

ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ನಿಜ. ನಾನು ಚಾಸಾ 1 ರವರು ಹೇಳಿದ ಹಾಗೆ ಕರ್ತವ್ಯ ನಿರ್ವಹಿಸಬೇಕು ಎಂದರೆ ನಿಜ. ಆ ದಿನ ಚಾಸಾ 1 ರವರು ರಾತ್ರಿ ನನ್ನನ್ನು ಠಾಣೆಗೆ ಕರೆಯಿಸಿ ತಮಗೆ ಬಂದ ಮಾಹಿತಿಯನ್ನು ತಿಳಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಕರ್ತವ್ಯದ ಅವಧಿ ಏನೂ ಇರಲಿಲ್ಲ. ಆ ದಿನ ನಾನು ಕಛೇರಿಗೆ 3.30 ಕ್ಕೆ ಬಂದಾಗ ಚಾಸಾ 1 ರವರ ಜೊತೆ ಪಂಚರು ಇದ್ದರು. ಪಂಚರನ್ನು ಯಾರು ಕರೆಸಿದರು ಎಂಬುದು ಚಾಸಾ 1 ರವರಿಗೆ ಗೊತ್ತು, ಪಂಚರು ಕೂಲಿ ಕೆಲಸದವರಾಗಿದ್ದು, ಅವರ ವಿಳಾಸಗಳು ನನಗೆ ಗೊತ್ತಿಲ್ಲ. ಚಾಸಾ 1 ರವರು ಗೋವಾದಿಂದ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ರಸ್ತೆಗಾವಲು ಮಾಡುವುದಾಗಿ ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ದಿನ ನಾವು ಬೆಳಗಾವಿಯಿಂದ 3.45 ಗೆ ಹೊರಟೆವು. ನಾವು ಕಣಕುಂಬಿಗೆ ಕಿಣಯೇ ಮೂಲಕ ಹೋಗಿರುತ್ತೇವೆ. ಆ ದಿನ ಬಳೆಗಾವಿಯಿಂದ ಕಣಕುಂಬಿಗೆ ಹೋಗುವ ಸುಮಾರು 10-15 ವಾಹನಗಳನ್ನು ತಪಾಸಣೆ ಮಾಡಿದೆವು. ಕಿಣಯೇ ಹತ್ತಿರ 10 ವಾಹನಗಳನ್ನು ತಪಾಸಣೆ ಮಾಡಿದೆವು. ಆ ರೀತಿ ವಾಹನವನ್ನು ತಪಾಸಣೆ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅದೇ ರೀತಿ ಯಾವ ವಾಹನವನ್ನು ತಪಾಸಣೆ ಮಾಡಿದೆವು ಎಂದು ಹೇಳಲು ಆಗವುದಿಲ್ಲ. ಆ ದಿನ ಒಟ್ಟು 7 ಲಾರಿ ಹಾಗೂ 7-8 ಕಾರುಗಳನ್ನು ತಪಾಸಣೆ ಮಾಡಿರುತ್ತೇವೆ. ಸದರಿ ವಾಹನಗಳ ನೊಂದಣಿ ಸಂಖ್ಯೆ ಈಗ ಹೇಳಲು ಆಗುವುದಿಲ್ಲ. ಅನಂತರ ಕಣಕುಂಬಿ ತನಿಖೆ ಠಾಣೆಯ ಬಳಿ ಹೋಗಿ ಸುಮಾರು 4-5 ವಾಹನಗಳ ತಪಾಸಣೆ ಮಾಡಿರುತ್ತೇವೆ. ಸಾಮಾನ್ಯವಾಗಿ ಒಂದು ವಾಹನವನ್ನು ತಪಾಸಣೆ ಮಾಡಲು ಸುಮಾರು 10 ನಿಮಿಷ ಸಮಯವಾಗುತ್ತದೆ. ಕಿಣಯೇ ಹತ್ತಿರ ಸುಮಾರು 10-15 ನಿಮಿಷ ನಿಂತಿದ್ದೆ. ಕಣಕುಂಬಿಯ ಹತ್ತಿರ ಸುಮಾರು10 ನಿಮಿಷ ನಿಂತೆವು. ಬೆಳಗಾವಿಯಿಂದ ಕಣಕುಂಬಿಗೆ ಸುಮಾರು 20-25 ಕಿ.ಮಿ ಆಗುತ್ತದೆ. ಅ ದಿನ ನಾನು ಕಛೇರಿ ಒಳಗೆ ಹೋಗಿರುವುದಿಲ್ಲ, ಚಾಸಾ 1 ರವರ ಜೊತೆ ಜೀಪನಲ್ಲಿ ಕಣಕುಂಬಿಗೆ ಹೋಗಿರುತ್ತೇವೆ.

ಕಣಕುಂಬಿಯಿಂದ ಡೆಲ್ಟಾ ಧಾಬಾಗೆ ಸುಮಾರು 7-8 ಕಿ.ಮಿ ದೂರವಾಗುತ್ತದೆ. ಕಣಕುಂಬಿಯ ಬಳಿ ನಮ್ಮ ಅಬಕಾರಿಯ ತನಿಖಾ ಠಾಣೆ ಇರುತ್ತದೆ ಎಂದರೆ ನಿಜ. ನಾವು ಕಣಕುಂಬಿಯಿಂದ ಡೆಲ್ಟಾ ಧಾಬಾ ಹತ್ತಿರ ಹೋಗುತ್ತಿದ್ದಾಗ ಆರೋಪಿಯು ಸಿಕ್ಕಿರುತ್ತಾನೆ. ನಾವು ಡೆಲ್ಟಾ ಧಾಬಾ ಬಳಿ ಹೋಗುತ್ತಿದ್ದಾಗ ಆರೋಪಿಯು ರಸ್ತೆಯ ಅಂಚಿನಲ್ಲಿ ನಿಂತಿದ್ದ. 2020 ರಲ್ಲಿ ಕೊರೊನಾ ಸಾಂಕ್ರಾಮಿಕ ರೋಗದಿಂದ ಎಲ್ಲ ಕಡೆ ಲಾಕಡೌನ

ಚಾಲ್ತಿಯಲ್ಲಿತ್ತು ಎಂದರೆ ನಿಜ. ಅ ಸಮಯದಲ್ಲಿ ಗೋವಾ ರಾಜ್ಯದಲ್ಲಿ ಲಾಕಡೌನ ಇತ್ತು ಎಂದರೆ ನಿಜ. ಲಾಕಡೌನ ಇದ್ದಕಾರಣ ಸಾರ್ವಜನಿಕರು ಹೊರಗಡೆ ಓಡಾಡುವ ಹಾಗೆ ಇರಲಿಲ್ಲ ಎಂದರೆ ನಿಜ. ಆ ಸಮಯದಲ್ಲಿ ಬಂದೋಬಸ್ತ ಇದ್ದ ಕಾರಣ ಯಾರೂ ಸಹ ಹೊರಗಡೆ ಓಡಾಡುತ್ತಿರಲಿಲ್ಲ ಎಂದರೆ ನಿಜ. ಆ ದಿನ ಆರೋಪಿ ನಿಂತಿದ್ದ ಸ್ಥಳದ ಚೆಕಬಂದಿ ಹೇಳಲು ಆಗುವುದಿಲ್ಲ. ಆ ದಿನ ಒಟ್ಟು 80 ಲೀಟರ ಮದ್ಯ 40 ಕ್ಯಾನಗಳಲ್ಲಿ ಸಿಕ್ಕಿರುತ್ತದೆ. ಅ ದಿನ ಒಂದು ಬಾಟಲಿಯನ್ನು ಮಾತ್ರ ಸ್ಯಾಂಪಲಗಾಗಿ ತೆಗೆಯಲಾಗಿರುತ್ತದೆ ಮತ್ತು ಉಳಿದ ಬಾಟಲಿಗಳಿಂದ ಮದ್ಯವನ್ನು ಸ್ಯಾಂಪಲಗಾಗಿ ತೆಗೆದಿರುತ್ತಾರೆ. ಕಣಕುಂಬಿಯನ್ನು ಬಿಟ್ಟರೆ ಅಕ್ಕಪಕ್ಕದಲ್ಲಿ ಯಾವುದೇ ಗ್ರಾಮಗಳು ಸಿಕ್ಕುವುದಿಲ್ಲ ಎಂದರೆ ನಿಜ. ಆ ಸಮಯದಲ್ಲಿ ಯಾವುದೇ ಸಾರ್ವಜನಿಕರು ಓಡಾಡುತ್ತಿರಲಿಲ್ಲ ಎಂದರೆ ನಿಜ. ಆರೋಪಿಯ ಬಳಿ ಯಾವುದೇ ವಾಹನ ಸಿಕ್ಕಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ 80 ಲಿಟರನಷ್ಟು ಮದ್ಯವನ್ನು ಹೊತ್ತುಕೊಂಡು ಹೋಗಲು ಆಗುವುದಿಲ್ಲ ಎಂದರೆ ನಿಜ.

ಆ ದಿನ ಯಾವುದೇ ರೀತಿ ದಾಳಿ ಮಾಡಿಲ್ಲ, ನಾನು ಆರೋಪಿಸಿದ ಹಾಗೆ ಆರೋಪಿ ಯಾವುದೇ ಮದ್ಯವನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯಿಂದ ಸದರಿ ಎಂ.ಓ 1 ನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡ ವಿಚಾರವೂ ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೂ ಪ್ರಸ್ತುತ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ನಾನು ಯಾವುದೇ ದಾಳಿಯಲ್ಲಿ ಭಾಗವಹಿಸದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಾಹನವನ್ನು ತಪಾಸಣೆ ಮಾಡಿದ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಇಲಾಖಾ ಅಂಕಿ ಅಂಶಕ್ಕಾಗಿ ಸುಳ್ಳು ದೂರನ್ನು ದಾಖಲಿಸಿದ್ದು, ಆ ರೀತ್ಯಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.